ಕಂಗೊಳಿಸುವ ಪ್ರಶಾಂತ ಪ್ರದೇಶ. ಕಾರ್ಗಿಲ್‌ನಿಂದ 42 ಕಿ.ಮೀ. ದೂರದ 'ಸಾಂಕೂ' ಎಂಬ ಸಣ್ಣ ಪಟ್ಟಣವನ್ನು ದಿನದ ಕೊನೆಗೆ ಮುಟ್ಟುವ ಗುರಿಯಿಂದ ಹೊರಟೆವು.

## ಸಾಂಕೂ ಎಂಬ ಸುಂದರ ಹಾದಿ

ಕಾರ್ಗಿಲ್‌ನಿಂದ ಸುರು ನದಿ ಪಕ್ಕದಲ್ಲೇ ಸಾಂಕೂ ತನಕ ಸಾಗುವ ದಾರಿ ತುಂಬಾ ಸುಂದರವಾಗಿದೆ. ದಾರಿಯುದ್ದಕ್ಕೂ ಸಿಗುವ ಸಣ್ಣ ಸಣ್ಣ ಹಳ್ಳಿಗಳು, ನಗುಮೊಗದ ಹಳ್ಳಿಗರು, ಮೈಯೆಲ್ಲ ಅರಳಿನಿಂತ ಆಹ್ಲಾದಕರ ಪ್ರಕೃತಿ, ಹಿತಕೊಡುವ ತಂಗಾಳಿ, ಸೈಕಲ್ ತುಳಿಯುವ ಶ್ರಮವನ್ನು ಹಗುರಗೊಳಿಸಿ ಸಾಂಗವಾಗಿ ಸಾಂಕೂವನ್ನು ತಲುಪಿದೆವು.

ದೊಡ್ಡ ಬೋಗುಣಿ ಆಕಾರದ ಸುಂದರ ಊರಾದ ಸಾಂಕೂವಿನ ಸುತ್ತಲೂ ಹಲವಾರು ಸಣ್ಣ ಹಳ್ಳಿಗಳು ಹರಡಿಕೊಂಡಿವೆ. ಹಿನ್ನೆಲೆಯಲ್ಲಿ ಶಾಂತ, ನಿಶ್ಚಲ ಪರ್ವತಗಳು, ದಟ್ಟ–ಧೀಮಂತ ಹಸಿರು ಮರಗಳು, ಎಲ್ಲೆಲ್ಲೂ ಅರಳಿನಿಂತ ಬಣ್ಣಬಣ್ಣದ ಹೂ ಗಿಡಗಳು, ಚೇತೋಹಾರಿ ವಾತಾವರಣ. ಊರಿನ ನಡುವೆ ಕಾಶ್ಮೀರದಿಂದ ಬಂದ ಮುಸ್ಲಿಂ ಸಂತ ಸೈಯದ್ ಮೀರ್ ಹಾಸಿಮ್‌ರ ಸಮಾಧಿ ಇದೆ. ಹತ್ತಿರದ ಕಾರಿಸೇಖಾರ್ ಎಂಬ ಹಳ್ಳಿಯಲ್ಲಿ ಏಕಶಿಲೆಯಲ್ಲಿ ಕೆತ್ತಿದ 20 ಅಡಿ ಎತ್ತರದ ಮೈತ್ರೇಯ ಬುದ್ಧನ ಭವ್ಯ ಪ್ರತಿಮೆಯಿದೆ. ಆ ರಾತ್ರಿಯನ್ನು ಸಾಂಕೂವಿನಲ್ಲೆ ಕಳೆದು ಮರುದಿನ ರಂಗ್‌ದುಮ್‌ನತ್ತ ಹೊರಟೆವು.


## ಕಲ್ಲು ಮುಳ್ಳಿನ ಕಲ್ಲುದಾರಿಯಲ್ಲಿ...


ಹುರುಪಿನಿಂದ ಸಾಂಕೂವಿನಿಂದ ಹೊರಟರೂ ಮುಂದಿನ ಪುರ್ತ್ಸಾಚಿಕ್ ತನಕದ 40 ಕಿ.ಮೀ. ಕಠಿಣ ದಾರಿ ನಮ್ಮನ್ನೆಲ್ಲ ದಣಿಸಿಬಿಟ್ಟಿತು. ಚೆನ್ನಾಗಿದ್ದ ರಾಜರಸ್ತೆ ಮಾಯವಾಗಿ ಕಲ್ಲು ಮುಳ್ಳಿನ ಕಾಲುದಾರಿಯಾಯಿತು. ಜತೆಗೆ ಜೋರಾಗಿ ಒಂದೇ ಸಮನೆ ಬೀಸುತ್ತಿದ್ದ ದೂಳು–ಮರಳಿನ ಬಿರುಗಾಳಿ, ಕಡಿದಾದ ಏರು ನಮ್ಮ ವೇಗವನ್ನು ತೀರಾ ಕುಂಠಿತಗೊಳಿಸಿತು. ಈ ಕಠಿಣ ಪರಿಸ್ಥಿತಿಗಳು ದೇಹವನ್ನು ಸುಸ್ತುಗೊಳಿಸಿದರೂ, ಒಳಗಿನಿಂದ ಹಿಮಾಲಯದ ಸೈಕಲ್ ಸವಾರರಿಗೆ ಬೇಕಾದ ಧೈರ್ಯ, ಸಹನೆಯನ್ನು ಗಟ್ಟಿಗೊಳಿಸಿದವು. ಆ ರಾತ್ರಿ ಪುರ್ತ್ಸಾಚಿಕ್‌ನಲ್ಲೇ ವಿರಮಿಸಿ, ಮರುದಿನ ಬೆಳಿಗ್ಗೆ 40 ಕಿ.ಮೀ. ದೂರದ ರಂಗ್‌ದುಮ್‌ನತ್ತ ಹೊರಟೆವು. ಅರ್ಧ ದಿನ ಕಡಿದಾದ ದಾರಿ ಹತ್ತುವುದರಲ್ಲೇ ಕಳೆಯಿತು. ಹತ್ತಿದಾಗ ಸಿಗುವ ಬುದ್ಧಗುಡಿಯ ಪೌಳಿ ಗೋಡೆಗೆ ಹೊರಗೆ ಕಾಲು ಚಾಚಿ ಸ್ವಲ್ಪ ವಿರಮಿಸಿಕೊಂಡೆವು. 12,000 ಅಡಿಗಳ ಎತ್ತರಕ್ಕೆ ನಮ್ಮ ದೇಹಗಳು ನಿಧಾನವಾಗಿ ಒಗ್ಗಿಕೊಳ್ಳತೊಡಗಿದ್ದವು.

ಆ ಗುಡಿಯ ಸುತ್ತ ಮಣ್ಣಿನ ಮನೆಗಳು. ಸುತ್ತಲೂ ಹರಡಿದ ಗಾಢ ಮೌನದ ಮಧ್ಯೆ ಮನೆಗಳ ಮೇಲೆ ಕಟ್ಟಿದ ಬಣ್ಣಬಣ್ಣದ ಬುದ್ಧನ ಪ್ರಾರ್ಥನಾ ಪತಾಕೆಗಳು ಬೀಸುವ ಗಾಳಿಗೆ ಹೊಡೆದುಕೊಳ್ಳುವ ಪಟಪಟ ಶಬ್ದದಲ್ಲಿ ಒಂದು ರೀತಿ ಮಾಂತ್ರಿಕತೆಯಿತ್ತು. ಸುಧಾರಿಸಿಕೊಂಡು ಕೊನೆಗೂ ರಂಗ್‌ದುಮ್ ಮುಟ್ಟಿದಾಗ ಸಂಜೆಯಾಗಿತ್ತು. ರಂಗ್‌ದುಮ್ ಸುರು ಕಣಿವೆಯ ಒಂದು ಸಣ್ಣ ಹಳ್ಳಿ. ಹಳ್ಳಿಯ ಒಂದು ಬದಿಯಲ್ಲಿ ಬಣ್ಣಬಣ್ಣದ ಗುಡ್ಡಗಳ ಸಾಲು, ಇನ್ನೊಂದು ಬದಿ ಹಿಮಕವಿದ ಉನ್ನತ ಪರ್ವತಗಳ ಶ್ರೇಣಿ. ಹಳ್ಳಿಯಲ್ಲಿರುವುದು ಕೆಲವೇ ಮನೆಗಳು ಮತ್ತು ಒಂದೆರಡು ಚಹಾ ಹೋಟೆಲುಗಳು. ಹಳ್ಳಿಯ ಹೊರಭಾಗದಲ್ಲಿದ್ದ ಪ್ರವಾಸಿಗರ ಬಟ್ಟೆಯ ಗುಡಾರಗಳಲ್ಲಿ ಆ ರಾತ್ರಿ ಕಳೆದೆವು.

ಪೆನ್ಸಿಲಾ ಕಣಿವೆ ಝನ್ಸ್‌ಕಾರ್ ಕಣಿವೆಗೆ ಹೆಬ್ಬಾಗಿಲಿದ್ದಂತೆ. ರಂಗ್‌ದುಮ್‌ನಿಂದ ಪೆನ್ಸಿಲಾದತ್ತ ಹೊರಟಾಗ ಚಳಿಯಲ್ಲಿ ಕೈ ಬೆರಳುಗಳು ಮರಗಟ್ಟಿ ಸೈಕಲ್ ಬಿಡುವುದೇ ಕಷ್ಟವಾಗತೊಡಗಿತು. ರಸ್ತೆ ಕೆಟ್ಟು ಹೋಗಿ ಅಲ್ಲಲ್ಲಿ ರಿಪೇರಿ ಕೆಲಸ ನಡೆಯುತ್ತಿತ್ತು. ಸಣ್ಣ ವಾಹನ ಹೋದರೂ ಬಿಳಿ ದೂಳಿನ ಸುಂಟರಗಾಳಿ. ಪೆನ್ಸಿಲಾ ಮುಟ್ಟಿದಾಗ ತಲೆಯಿಂದ ಕಾಲಿನವರೆಗೂ ದೂಳೇ ದೂಳು.

ಪೆನ್ಸಿಲಾದಿಂದ ಶುರುವಾದ ಇಳಿತ ತುಂಬಾ ಕಠಿಣವಾಗಿತ್ತು. ಮುಂದಿನ 15 ಕಿ.ಮೀ.ಗಳನ್ನು 2 ಗಂಟೆಗಳಲ್ಲಿ ಕ್ರಮಿಸಿ ಅಬ್ರಾನ್ ಗ್ರಾಮ ತಲುಪಿದೆವು. ಅಲ್ಲಿಂದ ಆ ದಿನ ಸೈಕಲ್ ಪ್ರಯಾಣ ಅಸಾಧ್ಯವೆಂದು ಅರಿತು, ಅಲ್ಲೇ ಸಿಕ್ಕ ಒಂದು ಲಾರಿಯಲ್ಲಿ ಸೈಕಲುಗಳ ಸಮೇತ ಹತ್ತಿ 40 ಕಿ.ಮೀ. ದೂರದ ಪಾದುಮ್ ನಗರ ಮುಟ್ಟಿದಾಗ, ಸಂಜೆಯ ಹೊಂಬೆಳಕಿನಲ್ಲಿ ಪಾದುಮ್ ನಗರ ಚಂದವಾಗಿ ಕಂಗೊಳಿಸುತ್ತಿತ್ತು.


ಸರ್ಪ್ ನದಿದಂಡೆಯ ಫುಗ್‌ತಾಲ್ ಬುದ್ಧ ಮಂದಿರಕ್ಕೆ ಕಾಲ್ನಡಿಗೆ


ಶಿಂಕುಲಾದಿಂದ ಹಿಮಾಚಲ ಪ್ರದೇಶಕ್ಕೆ



ಶಿಂಕುಲಾ ಮುಟ್ಟಿದ ಖುಷಿಯಲ್ಲಿ...